ಕ್ಷಣ ಕ್ಷಣದ ಸುದ್ದಿಗಾಗಿ
ವಿಶ್ವವಾಣಿ timely ಆ್ಯಪ್ ಡೌನ್‌ಲೋಡ್ ಮಾಡಿ

ವಿಶ್ವವಾಣಿ
ಬೆಂಗಳೂರು
vishwavani.news
09.11.2018 ಶುಕ್ರವಾರ

ಸಂಪಾದಕೀಯ

ಸಂಪುಟ ವಿಸ್ತರಣೆ ಮತ್ತೊಮ್ಮೆ ಕಸರತ್ತು

ಉಪಚುನಾವಣೆಯಲ್ಲಿ ಮೈತ್ರಿ ಪಕ್ಷದ ಜತೆಗೂಡಿ ತನ್ನ ಸ್ಥಾನ ಹಿಗ್ಗಿಸಿಕೊಂಡ ಕಾಂಗ್ರೆಸ್ ಅದೇ ಹುರುಪಿನಲ್ಲಿ ಲೋಕಸಭೆ ಚುನಾವಣೆಗೂ ಮುನ್ನವೇ ತನ್ನ ಪಾಲಿನ ಸಚಿವ ಸಂಪುಟದ ಸ್ಥಾನಗಳು ಮತ್ತು ನಿಗಮ ಮಂಡಳಿ ಅಧ್ಯಕ್ಷ ಸ್ಥಾನಗಳನ್ನು ಭರ್ತಿ ಮಾಡಲು ತೀರ್ಮಾನಿಸಿದೆ. ಕೆಪಿಸಿಸಿ ಸಿದ್ಧಗೊಳಿಸಿದ ಪಟ್ಟಿಯನ್ನು ಉಪಚುನಾವಣೆ ಗೆಲುವಿನ ಸಂಭ್ರಮದ ಸಂದರ್ಭದಲ್ಲೇ ರಾಜ್ಯ ಕಾಂಗ್ರೆಸ್ ಉಸ್ತುವಾರಿ ಕೆ.ಸಿ. ವೇಣುಗೋಪಾಲ್ ದೆಹಲಿಯತ್ತ ಹೊತ್ತು ಸಾಗಿದ್ದಾರೆ. ಈ ಪಟ್ಟಿಗೆ ಎಐಸಿಸಿ ಅಧ್ಯಕ್ಷ ರಾಹುಲ್ ಗಾಂಧಿ ಒಪ್ಪಿಗೆ ಮುದ್ರೆ ಹಾಕುತ್ತಾರೆ ಎನ್ನಲಾಗಿದೆ. ಉಪಚುನಾವಣೆಯಲ್ಲಿ ನೂರೆಂಟು ತಾಪತ್ರಯ ಮತ್ತು ಭಿನ್ನಮತದ ನಡುವೆಯೇ ಹೋರಾಟ ನಡೆಸಿದ ಕಾಂಗ್ರೆಸ್, ಮುಂದಿನ ಲೋಕಸಭಾ ಚುನಾವಣೆ ವೇಳೆಗೆ ಮತ್ತಷ್ಟು ಸಂಘಟಿತವಾಗಬೇಕಾದ ಅನಿವಾರ್ಯತೆಯಲ್ಲಿದೆ. ಆದರೆ, ಈ ನಡುವೆಯೇ ನಡೆಯುವ ಸಂಪುಟ ವಿಸ್ತರಣೆ ಸರ್ಕಸ್ ಮತ್ತು ನಿಗಮ ಮಂಡಳಿ ಅಧ್ಯಕ್ಷರ ನೇಮಕಗಳು ಪಕ್ಷದಲ್ಲಿ ಮತ್ತಷ್ಟು ಭಿನ್ನಮತ ಹೆಚ್ಚಿಸುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ. ಸಚಿವ ಸಂಪುಟದಲ್ಲಿ ಸ್ಥಾನ ಪಡೆಯುವ ಸಲುವಾಗಿ ಅನೇಕ ನಾಯಕರು ಸರತಿಯಲ್ಲಿದ್ದಾರೆ. ಲಿಂಗಾಯತ ಸಮುದಾಯದ ಎಂ.ಬಿ ಪಾಟೀಲ, ಎಸ್.ಆರ್. ಪಾಟೀಲ್ ಸಚಿವ ಸ್ಥಾನ ಆಕಾಂಕ್ಷಿಗಳಾಗಿದ್ದು, ಎಂ.ಬಿ. ಪಾಟೀಲ್‌ಗೆ ಸ್ಥಾನ ಸಿಗುವುದು ಖಚಿತ ಎನ್ನಲಾಗುತ್ತಿದೆ. ಎಸ್.ಆರ್.ಪಾಟೀಲ್ ಸಭಾಧ್ಯಕ್ಷ ಸ್ಥಾನಕ್ಕೆ ತೃಪ್ತಿಪಟ್ಟುಕೊಳ್ಳುವ ಮಾತನ್ನಾಡಿದ್ದು, ಉಳಿದಂತೆ ಅತೃಪ್ತ ಬಣ ಸಚಿವ ಸ್ಥಾನಕ್ಕಾಗಿ ಕಾಯುತ್ತಿದೆ. ಎಂ.ಬಿ ಪಾಟೀಲ್ ಸೇರಿ ಉತ್ತರ ಕರ್ನಾಟಕದ ಮೂವರು ಶಾಸಕರಿಗೆ ಸಚಿವ ಸ್ಥಾನ ನೀಡಬೇಕು ಎಂಬ ಮನವಿಗೆ ಹೈಕಮಾಂಡ್ ಸ್ಪಂದಿಸದಿದ್ದರೆ, ಉತ್ತರ ಕರ್ನಾಟಕಕ್ಕೆ ಅನ್ಯಾಯ ಎಂಬ ಕೂಗು ಶುರುವಾಗುತ್ತದೆ. ಉಳಿದಂತೆ ಹಿರೇಕೆರೂರು ಶಾಸಕ ಬಿ.ಸಿ. ಪಾಟೀಲ್ ಮತ್ತು ಸುಧಾಕರ್ ನಿರಂತರ ಹೋರಾಟ ನಡಸುತ್ತಾ ಬಂದಿದ್ದಾರೆ. ಅವರಿಗೆ ಸ್ಥಾನ ಸಿಗದಿದ್ದರೆ ಬಂಡಾಯ ಖಚಿತ. ನಗರದ ನಾಯಕರಲ್ಲಿ ಅಸಮಧಾನದ ಹೊಗೆಯಾಡುತ್ತದೆ. ಇದು ಲೋಕಸಭೆ ಚುನಾವಣೆ ಮೇಲೆ ಪರಿಣಾಮ ಬೀರುವ ದಟ್ಟಸಾಧ್ಯೆಗಳಿದ್ದು, ಇದನ್ನು ಕಾಂಗ್ರೆಸ್ ಹೈಕಮಾಂಡ್ ಮತ್ತು ರಾಜ್ಯ ನಾಯಕರು ಯಾವ ರೀತಿ ನಿಭಾಯಿಸುತ್ತಾರೆ ಎಂಬುದನ್ನು ಕಾದು ನೋಡಬೇಕಿದೆ. ಸರಕಾರದ ಕಾಲೆಳೆಯುವ ತವಕದಲ್ಲಿರುವ ಬಿಜೆಪಿ ನಾಯಕರಿಗೆ ಈ ಸಂಪುಟ ವಿಸ್ತರಣೆ ಅಸ್ತ್ರವಾಗದಂತೆ ನೋಡಿಕೊಳ್ಳುವ ಹೊಣೆಗಾರಿಕೆ ಉಭಯ ಪಕ್ಷಗಳ ನಾಯಕರ ಮೇಲಿದೆ. ಈಗ ಮತ್ತೆ ಸಂಪುಟ ವಿಸ್ತರಣೆ ಮುಂದೆ ಹೋದರೆ ಸದ್ಯಕ್ಕೆ ಅದು ನಿಂತಂತೆ. ಆದ್ದರಿಂದ ಗೊಂದಲಗಳಾಗಂತೆ ನೋಡಿಕೊಳ್ಳುವ ಜವಾಬ್ದಾರಿ ಸಚಿವಾಕಾಂಕ್ಷಿಗಳ ಮೇಲೂ ಇದೆ.

ಚಿತ್ರಸ್ಫೂರ್ತಿ

ಯಾವುದೇ ಕೆಲಸ ಪರಿಶ್ರಮವಿಲ್ಲದೆ ಪೂರ್ಣಗೊಳ್ಳುವುದಿಲ್ಲ. ಪರಿಶ್ರಮವೇ ಯಶಸ್ಸಿನ ಹುಟ್ಟು.

ತಿಳಿಸಾರ

ಭಾರತದಲ್ಲಿ ಮಕ್ಕಳ ಹಸಿವು ಗಂಭೀರ ಸಮಸ್ಯೆ

ಜಾಗತಿಕ ಹಸಿವು ಸೂಚಿ (ಜಿಎಚ್‌ಐ) ಪ್ರಕಾರ ಹಸಿವು ಹಾಗೂ ಅಪೌಷ್ಟಿಕತೆಯ ಪ್ರಮಾಣ ವಿಶ್ವದಲ್ಲಿ ಗಂಭೀರ ಮಟ್ಟ ತಲುಪಿದೆ. ಇದು **2000**ರಲ್ಲಿ **29.2** ಇದ್ದುದು **20.9**ಕ್ಕೆ ಕುಸಿದಿದೆ. 2030ರ ಹೊತ್ತಿಗೆ ಹಸಿವು ಮುಕ್ತ ಜಗತ್ತಿನ ನಿರ್ಮಾಣ ಸವಾಲಾಗಿ ಪರಿಣಮಿಸಿದೆ



ಭಾರತದಲ್ಲಿ ಮಕ್ಕಳ ಕುಂಠಿತ ಬೆಳವಣಿಗೆ **2000**ದಲ್ಲಿ **54.2%** ಇದ್ದುದು **38.4%** ಕ್ಕೆ ಇಳಿಮುಖಗೊಂಡಿದೆ.

38.4%

20%

ಐದು ವರ್ಷದೊಳಗಿನ **20%**ರಷ್ಟು ಮಕ್ಕಳು ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ.

2000ರಲ್ಲಿದ್ದ **9.2%** ಇದ್ದ ಶಿಶು ಮರಣ **4.3%**ಗೆ ಇಳಿಕೆಯಾಗಿದೆ.

4.3%

ಚದ್, ಹೈಟಿ, ಮಡಗಾಸ್ಕರ್, ಸಿಯೆರಾ ಲಿಯೋನ್, ಯೆಮೆನ್, ಮತ್ತು ಜಾಂಬಿಯಾಗಳಲ್ಲಿ ಹಸಿವಿನ ಪ್ರಮಾಣ ವಿಕೋಪಕ್ಕೇರಿದೆ.

ಹಂಗರ್ ಇಂಡೆಕ್ಸ್ ರ‍್ಯಾಂಕಿಂಗ್‌ನಲ್ಲಿ ಇರುವ **119** ರಾಷ್ಟ್ರಗಳ ಪೈಕಿ ಭಾರತವು **103**ನೇ ಸ್ಥಾನದಲ್ಲಿದೆ.

ಕಾಕಾ ಹೋಟ್ಲು

ಅಂತೂ ತೃತೀಯ ರಂಗ ಮತ್ತೊಮ್ಮೆ ಆರಂಭವಾಗುತ್ತಿದೆ ಅನ್ನೋದು ಗ್ಯಾರಂಟಿ ಆಯ್ತು

ಧೀರು

-ಹೆಸರೇ ತೃತೀಯ ರಂಗ, ಮನೆಯೊಂದು ಮೂರು ಬಾಗಿಲು ಆಗದಿರಲಿ!

ಸುಧೀರು

ಅಸಾಧಾರಣ ಶ್ರಮವೇ ಸಾಮಾನ್ಯರೂ ಗುರಿ ತಲುಪುವ ಗುಟ್ಟು!

TED ಟಾಕ್

ನಮಸ್ಕಾರ. ನಾನು ಡಾ. ಅಮೃತಾ. ವೈದ್ಯಕೀಯ ಓದಿದರೂ ಒಬ್ಬ ಐಪಿಎಸ್ ಅಧಿಕಾರಿ ತರಬೇತಿಗೊಳ್ಳುತ್ತಿದ್ದೇನೆ. ವಿವಾಹಿತೆ, ಐದೂವರೆ ವರ್ಷದ ಮಗ ಇದ್ದಾನೆ. ಐಪಿಎಸ್‌ಗೆ ಸೆಲೆಕ್ಟ್ ಆಗುವ ಮುಂಚೆ ನಾನು ವೈದ್ಯಕೀಯ ಕಾಲೇಜೊಂದರಲ್ಲಿ ಪೆಥಾಲಜಿಯ ಅಸೋಸಿಯೇಟ್ ಪ್ರೊಫೆಸರ್ ಆಗಿದ್ದೆ. ಸದ್ಯ, ನಾನು ತರಬೇತಿಯಲ್ಲಿರುವ ಎಎಸ್‌ಪಿ...ನನ್ನ ಸಹ ಭಾಷಣಕಾರರು ಈ ವೇದಿಕೆಯಲ್ಲಿ ಅನೇಕ ಹೊಸ ಹೊಸ ವಿಚಾರಗಳನ್ನು ತಿಳಿಸಿದ್ದಾರೆ. ಇತರರಲ್ಲಿ, ಸಮಾಜದಲ್ಲಿ ಅವು ಒಂದು ಧನಾತ್ಮಕ ಬದಲಾವಣೆ ತರುವಂಥವಾಗಿವೆ. ನನ್ನ ಸಾಧನೆ ಇವುಗಳ ಮುಂದೆ ಅಷ್ಟೇನೂ ಹಿರಿದಾಗಿರದಿದ್ದರೂ, ಖಂಡಿತ ಅದಕ್ಕೆ ಸಂಬಂಧಿಸಿದ ನನ್ನ ಕೆಲವು ಅನುಭವಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳಬಯಸುತ್ತೇನೆ.

ನಮ್ಮೆಲ್ಲರದೂ ಸಾಮಾನ್ಯವಾದ ಜೀವನ, ಸಾಮಾನ್ಯ ಸಾಧನೆ. ಎಲ್ಲರೂ ವಂಶವಾಹಿಗಳಲ್ಲಿ ಅಸಾಧಾರಣ ಪ್ರತಿಭೆ ಹೊತ್ತು ಬಂದಿರುವುದಿಲ್ಲ, ಆದರೆ ಕಠಿಣ ಪರಿಶ್ರಮದಿಂದ ಅಗತ್ಯವಾಗಿ ಅದನ್ನು ದೊಡ್ಡದಾಗಿಸಬಹುದು ಎಂಬುದು ನನ್ನ ನಂಬಿಕೆ. ಸಣ್ಣವಳಿದ್ದಾಗ ದೂರದರ್ಶನದಲ್ಲಿ ಪ್ರಸಾರವಾಗುತ್ತಿದ್ದ ಒಂದು ಧಾರಾವಾಹಿ ನನ್ನನ್ನು ಬಹಳ ಸೆಳೆದಿತ್ತು. ಅದರ ಮುಖ್ಯಪಾತ್ರವಾದ 'ಕಲ್ಯಾಣಿ ಸಿಂಗ್' ಒಬ್ಬ ಐಪಿಎಸ್ ಅಧಿಕಾರಿ. ಒಂದು ಸಂದರ್ಶನದಲ್ಲಿ ಆಕೆಯನ್ನು 'ಜೀವನದಲ್ಲಿ ಏನು ಮಾಡಬೇಕೆಂದಿರುವೆ?' ಎಂದು ಕೇಳಲಾಗುತ್ತದೆ. 'ಮುಂದೊಂದು ದಿನ ಈ ಮೇಜಿನಾಚೆ ಇರುವ ಸ್ಥಾನಗಳಲ್ಲಿ ಕೂರಬಯಸುತ್ತೇನೆ' ಎಂಬುದು ಆಕೆ ನೀಡುವ ಚುರುಕು ಉತ್ತರ. ಈಗಲೂ ಕಿವಿಗಳಲ್ಲಿ ಪ್ರತಿಧ್ವನಿಸುವ ಆ ಉತ್ತರ ನನಗೆ ಬಹಳ ಸ್ಫೂರ್ತಿದಾಯಕವಾಗಿತ್ತು.

ಆದರೆ ಕಾಲ ಸರಿದಂತೆ ಅದು ಹೇಗೋ ಮಸುಕಾಯಿತೆನ್ನಿ. ಎಲ್ಲ ಕೆಳ ಮಧ್ಯಮ ವರ್ಗದ ಕುಟುಂಬಗಳು ಮಾಡುವಂತೆ ನನಗೂ ಎಂಬಿಬಿಎಸ್ ಆನಂತರ ಎಂಡಿ ಪದವಿ ಪಡೆದುಕೊಳ್ಳುವಂತೆ ಮಾರ್ಗದರ್ಶನ ಮಾಡಿದರು. ಅಷ್ಟು ಮಾಡಿ ತೃಪ್ತಳಾಗಿ ಕೂತಿದ್ದೆ. ಹಾಗೆ ಅದಕ್ಕೂ ಬಹಳ ಕಷ್ಟಪಟ್ಟಿದ್ದೆ. ವೈದ್ಯಕೀಯ ಪದವಿಯನ್ನು ಯಾರೂ ಹರಿವಾಣದಲ್ಲಿಟ್ಟು ನನಗೆ ಕೊಟ್ಟಿರಲಿಲ್ಲ. ಕುಟುಂಬದ ಮೊದಲ ಡಾಕ್ಟರ್, ಅದೂ ಎಂಬಿಬಿಎಸ್ ವೈದ್ಯೆಯಾದ ಹೆಗ್ಗಳಿಕೆ ನನ್ನದು. ಅದರಿಂದ ಗಳಿಸಿದ ವಿಶ್ವಾಸದಿಂದ ಔದ್ಯೋಗಿಕವಾಗಿ ಉತ್ತಮ ಹುದ್ದೆ ಗಳಿಸಿಕೊಂಡೆ. ಇದೇ ವೇಳೆಗೆ ನನ್ನ ಮದುವೆಯೂ ಆದ್ದರಿಂದ ನಾನು ಕಾಲೇಜಿನಲ್ಲಿ ಸಹ ಪ್ರಾಧ್ಯಾಪಕಿ ಹಾಗೂ ಗೃಹಿಣಿ ಎರಡೂ ಪಾತ್ರಗಳನ್ನು ನಿರ್ವಹಿಸಲಾರಂಭಿಸಿದೆ.

ಒಬ್ಬ ಸಾಂಪ್ರದಾಯಿಕ ಭಾರತೀಯ ಮಹಿಳೆಗೆ ಒಪ್ಪುವ ರೀತಿಯಲ್ಲಿ ಬದುಕು ಸುಸೂತ್ರವಾಗಿ ಸಾಗಿತ್ತು. ಅತ್ತೆ-ಮಾವನಿಗೆ ವೈದ್ಯೆ ಸೊಸೆ ದೊರೆತ ಬಗ್ಗೆ ಹೆಮ್ಮೆ ಇತ್ತು. ಮತ್ತು ಈ ಮಧ್ಯೆ 'ಸಿವಿಲ್ ಸರ್ವಿಸಸ್' ಎಂಬುದು ಯಾರೋ ಅನ್ಯರಿಗಾಗಿ ಬಿಟ್ಟದ್ದು ಎಂಬ ಭಾವನೆ. ಆದರೆ ಮೂರು ವರ್ಷದ ಹಿಂದೆ ನನ್ನ ತಮ್ಮ ಆಡಳಿತ ಸೇವೆ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿ ಐಪಿಎಸ್‌ಗೆ ಸೇರ್ಪಡೆಯಾದ. ತನ್ನದೇ ಹಾದಿ ಸೃಷ್ಟಿಸಿಕೊಂಡು ಗುರಿ ತಲುಪಿದ ಅವನು ನಾನೂ ಅದರಲ್ಲಿ ನಡೆಯಲಿ ಎಂದು ಆಸೆಪಟ್ಟ. ನನ್ನಲ್ಲಿದ್ದ ಆಕಾಂಕ್ಷೆಯ ಜ್ವಾಲೆಗೆ ಗಾಳಿ ಊದಿ ಮರೆತುಹೋಗಿದ್ದ ಕನಸುಗಳನ್ನು ನೆನಪಿಸಿದ. ಮೊದಲಿಗೆ ನನಗೆ ಇಷ್ಟವಿರಲಿಲ್ಲ. ಒಂದು ನೋಬೆಲ್ ಪ್ರೊಫೆಷನ್ ಎಂದು ಕರೆಯಲಾಗುವ ವೈದ್ಯೆಯಾಗಿ, ಒಳ್ಳೆ ಸಂಪಾದನೆ ಹೊಂದಿ ಜೀವನ ಸುಖವಾಗಿ ಸಾಗಿಸುತ್ತಿದ್ದುದು, ಸಮಾಜದಲ್ಲಿ ಸಾಕಷ್ಟು ಗೌರವ ಗಳಿಸಿಕೊಂಡಿದ್ದುದೇ ಅಲ್ಲದೆ ನನ್ನ ಬದುಕಿನ 15 ವರ್ಷಗಳನ್ನು ಅದಕ್ಕಾಗಿ ತೆತ್ತಿದ್ದೆ. ಈ ವೇಳೆ ಒಬ್ಬ ಮಗ ಹುಟ್ಟಿದ್ದ. ಅವನು ನನ್ನ ಗಮನ ಅಗತ್ಯ ಇರುವ ಸಣ್ಣವ ಹಾಗೂ ಅದಿಲ್ಲದಿದ್ದರೆ ದೂರಬಲ್ಲಷ್ಟು ದೊಡ್ಡವನೂ ಆಗಿದ್ದ.

ಆದರೆ ನನ್ನ ಸಹೋದರನ ಒತ್ತಾಯ ಮುಂದುವರಿಯಿತು. 'ಒಂದು ಸಾರಿ ರೆಕ್ಕೆ ಬಿಚ್ಚು, ಹಾರಲು ಪ್ರಯತ್ನಿಸು' ಎಂಬ ಆ ಹುರಿದುಂಬುವಿಕೆಯ ಮಧ್ಯೆಯೇ ಸದ್ಯ ನನ್ನ ಜೀವನದ ಆದ್ಯತೆಗಳು ಏನಾಗಬೇಕು ಎಂದು ಚಿಂತಿಸಿದೆ. ಖಂಡಿತ ನನ್ನ ಕುಟುಂಬವೇ ನನ್ನ ಪ್ರಪ್ರಥಮ ಆಯ್ಕೆ ಎಂಬುದು ಸ್ಪಷ್ಟವಾಯಿತು. ಆದರೂ 'ನನ್ನ ವೈಯಕ್ತಿಕ ಅಭಿಲಾಶೆಗಳ ಕತೆ ಏನಾಗಬೇಕು?' ಎಂಬುದೂ ಮನ ಕೊರೆಯುತ್ತಿತ್ತು. ಸಮಾಜಕ್ಕೆ ಏನಾದರೂ ಮರಳಿ ನೀಡಬೇಕೆನ್ನುವ ನನ್ನ ಹಂಬಲ ಕಳೆದುಹೋಗಿದೆಯೇ ಎಂದು ಪ್ರಶ್ನಿಸಿಕೊಂಡೆ. ಹೌದು ನನ್ನ 'ಕಂಫರ್ಟ್ ಝೋನ್'ನಿಂದ ಹೊರಬಂದು ಮತ್ತೇನಾದರೂ ಮಾಡುವಷ್ಟು ಧೈರ್ಯ ನನಗೆ ಇಲ್ಲದಾಗಿತ್ತು. ವಯಸ್ಸು, ವೃತ್ತಿ ಹಾಗೂ ನನ್ನ ಕುಟುಂಬ ಇದಕ್ಕೆ ಅಡೆತಡೆಗಳಾಗಿವೆಯೇ ಎಂಬ ವಿಚಾರ ಮೂಡಿದಾಗ, 'ಇಲ್ಲ, ಹಾಗಾಗಕೂಡದು' ಎಂದು ಯೋಚಿಸಿದೆ. ಎಡರು ತೊಡರಲ್ಲ, ಅವು ನನ್ನ ವಿಶೇಷ ಶಕ್ತಿಗಳಾಗಬೇಕು ಎಂಬುದು ಗಟ್ಟಿಯಾದ ಕೂಡಲೇ ನಾನು ಪರೀಕ್ಷೆ ತೆಗೆದುಕೊಳ್ಳಲು ತಯಾರಿ ನಡೆಸಿದೆ.

ಯುಪಿಎಸ್‌ಸಿ ಪರೀಕ್ಷೆಗಳಿಗಾಗಿ ನಾನು ಬಹಳ ಏನೂ ತಯಾರಿ ನಡೆಸಲಿಲ್ಲ. ವಾರದಲ್ಲಿ ಐದು ದಿನ, ಸರಾಸರಿ 12 ಗಂಟೆ ಅಧ್ಯಯನದಲ್ಲಿ ತೊಡಗಿಕೊಂಡೆ; ವಾರಾಂತ್ಯ ಕುಟುಂಬಕ್ಕೆ ಮೀಸಲು. ಇಲ್ಲಿ ಒಂದು ಘಟನೆಯನ್ನು ನಿಮಗೆ ಹೇಳಲೇಬೇಕು. ಒಂದು ವೀಕ್‌ಎಂಡ್ ಮನೆಗೆ ಹೋದಾಗ ನನ್ನ ಮಗ ಹಾಯಾಗಿ ಮಲಗಿ ನಿದ್ರಿಸುತ್ತಿದ್ದ. ಹಾಗೇ ಅವನ ಪಕ್ಕ ಉರುಳಿಕೊಂಡೆ. ಎಚ್ಚರಿಕೆಯಾದ ಮೇಲೆ ಅವನು ಅಳುತ್ತಾ ಓಡಿಹೋದ; 'ಯಾರೋ ಅಪರಿಚಿತ ಆಂಟಿ ನನ್ನ ಹಾಸಿಗೆಯಲ್ಲಿ ಮಲಗಿದ್ದಾರೆ' ಎಂದು ದೂರಿದ. ನಾನು ಅವನ ತಾಯಿ ಎಂದು ಗೊತ್ತುಮಾಡಿಕೊಳ್ಳಲು ಸಾಕಷ್ಟು ಸಮಯ ತೆಗೆದುಕೊಂಡ. ಎಂಥಾ ಅನುಭವ ನೋಡಿ, ಇದರಿಂದ ಆದ ಒಂದು ಲಾಭವೆಂದರೆ, ತಯಾರಿ ವೇಳೆ ಯಾವಾಗಲಾದರೂ ನನಗೆ ಬೇಸರವೆನಿಸಿದರೆ, ಸಾಕಪ್ಪಾ ಎಂದು ಸುಸ್ತಾದರೆ, ಅಂದು ಆದ ಅನುಭವ ಮೆಲುಕು ಹಾಕುತ್ತಿದ್ದೆ. ಕುಟುಂಬಕ್ಕೆ ನೀಡಬೇಕಾದ ಸಮಯದಿಂದ ಕದ್ದು ನನ್ನ ಅಧ್ಯಯನ ಮಾಡುತ್ತಿದ್ದೇನಾದ್ದರಿಂದ ಅದರ ಅತ್ಯುತ್ತಮ ಉಪಯೋಗ ಆಗಬೇಕು ಎಂದು ಮನಸ್ಸು ಸಂಕಲ್ಪಿಸುತ್ತಿತ್ತು.

ಸಿವಿಲ್ ಸರ್ವಿಸಸ್ ಪರೀಕ್ಷೆಗಳ ಫಲಿತಾಂಶ ಪ್ರಕಟವಾದಾಗ ದಿನಕ್ಕೆ 12 ಗಂಟೆ ಓದಿದ್ದು ಖಂಡಿತ ಫಲ ನೀಡಿತು. ನನ್ನ ಹೆಸರು ತೇರ್ಗಡೆಯಾದವರ ಪಟ್ಟಿಯಲ್ಲಿತ್ತು. ಮುಂದಿನ ಭಾಗವಾಗಿ ಹೈದರಾಬಾದ್‌ನ 'ನ್ಯಾಶನಲ್ ಪೊಲೀಸ್ ಅಕಾಡೆಮಿ'ಯಲ್ಲಿ ತರಬೇತಿ ಪಡೆದುಕೊಳ್ಳಲು ಹೋದಾಗ ನನಗೆ 33 ವರ್ಷ. ಆದರೆ ಕಳೆದ 16-17 ವರ್ಷಗಳಲ್ಲಿ ದೈಹಿಕ ಚಟುವಟಿಕೆಗಳಿಂದ ನಾನು ದೂರ ಇದ್ದೆ. ನಿಮ್ಮಲ್ಲಿ ಕೆಲವರಿಗಾದರೂ ಎನ್‌ಪಿಎ ನಡೆಸುವ ಈ 'ಭಯಾನಕ' ಹೊರಾಂಗಣ ಚಟುವಟಿಕೆಗಳ ಬಗ್ಗೆ ಗೊತ್ತಿರಬಹುದು. ಅಷ್ಟು ಕಠಿಣ ತರಬೇತಿ ಹೊಂದಬಲ್ಲೆನೇ ಎಂಬ ಕುರಿತು ನನಗೇ ವಿಪರೀತ ಆಳುಕಿತ್ತು. ಪ್ರತಿ ಸಾರಿ ಬಯಲಿನಲ್ಲಿ ಕಸರತ್ತು ಮಾಡಿ ಬಂದಾಗಲೂ ಅದು ಅಭ್ಯಾಸವಿಲ್ಲದ ನನ್ನ ವಯಸ್ಸಾದ ದೇಹ ನೋವಿನಿಂದ ಚೀರಿಡುತ್ತಿತ್ತು. ಒಂದು ಸಾರಿಯಂತೂ ಪರಿಸ್ಥಿತಿ ವಿಕೋಪಕ್ಕೆ ಹೋಯಿತು. ಹಿಪ್‌ಜಾಯಿಂಟ್‌ನಲ್ಲಿ ಅಸಾಧ್ಯ ನೋವುಂಟಾಗಿ ಕಾಲು ಎತ್ತಿಡುವುದು, ಮಗ್ಗುಲು ಬದಲಿಸುವುದು ಹರ ಸಾಹಸವಾಯಿತು.

ಆದರೆ ನಾನು ಓಡುವುದನ್ನು ಮಾತ್ರ ನಿಲ್ಲಿಸಲಿಲ್ಲ. ಸ್ನೇಹಿತರ, ದಳದ ಮುಖಂಡನ ಒತ್ತಾಸೆ, ಉತ್ತೇಜನಗಳಿಂದ ಓಡಿಯೇ ಓಡಿದೆ. ಒಂದೇ ವ್ಯತ್ಯಾಸವೆಂದರೆ ದಿನದಿಂದ ದಿನಕ್ಕೆ ನನ್ನ ನೋವಿನ ತೀವ್ರತೆಗೆ ಅನುಗುಣವಾಗಿ ನಾನು ಸೇವಿಸುತ್ತಿದ್ದ 'ಪೇಯ್ನ್ ಕಿಲ್ಲರ್' ಮಾತ್ರೆಯ ಡೋಸೇಜೂ ಹೆಚ್ಚುತ್ತಿತ್ತು. ಏನೇ ಆದರೂ ನೋವು ಕಡಿಮೆಯಾಗಲಿಲ್ಲ. ಕಡೆಗೆ 'ಎಕ್ಸ್‌ರೇ' ಪರೀಕ್ಷೆ ಮಾಡಿಸಿದಾಗ ಪೆಲ್ವಿಕ್ ಭಾಗದ ಮೂಳೆ ಮುರಿತ ಉಂಟಾಗಿತ್ತು. ಆದರೆ ಆ ದಿನಗಳಲ್ಲಿ ನಾನು 16 ಕಿ.ಮೀ. 'ಕ್ರಾಸ್ ಕಂಟ್ರಿ', 21 ಕಿ.ಮೀ. ಮ್ಯಾರಥಾನ್, 40 ಕಿ.ಮೀ. 'ರೂಟ್‌ಮಾರ್ಚ್'ಗಳನ್ನು ಮಾಡಿದ್ದೆ, 10-15 ಕೆ.ಜಿ. ಭಾರ ಬೆನ್ನ ಮೇಲೆ ಹೊತ್ತು ಉತ್ತಮ ಸಮಯದಲ್ಲೇ ಗುರಿ ಮುಟ್ಟಿದ್ದೆ ಎಂದು ಇಂದು, ಇಲ್ಲಿ ನಿಂತು ಹೇಳಲು ಹೆಮ್ಮೆಯಾಗುತ್ತದೆ.

ಎನ್‌ಪಿಎ ಅಲ್ಲಿ ಇನ್ನೂ ತೀವ್ರ ಬಗೆಯ ಕಸರತ್ತುಗಳಿದ್ದವು. ಪರೀಕ್ಷೆಯ ಭಾಗವಾಗಿ, 20 ಅಡಿ ಎತ್ತರವನ್ನು ಹಗ್ಗದ ಸಹಾಯದಿಂದ ಏರಬೇಕಿತ್ತು. ಎಲ್ಲರೂ ಮಾಡುತ್ತಾರಲ್ಲವೇ, ಇದೇನು ಮಹಾ ಎಂದು ಮೊದಲಿಗೆ ಅನ್ನಿಸಿತ್ತು. ಆದರೆ ಆ ಹಗ್ಗವನ್ನು ಹಿಡಿದು ಹತ್ತುವುದು ಹಾಗಿರಲಿ, ಸರಿಯಾಗಿ ಹಿಡಿಯಲೂ ನನಗೆ ಸಾಧ್ಯವಾಗಲಿಲ್ಲ. ನಾನು ಮತ್ತೆ, ಮತ್ತೆ ಪ್ರಯತ್ನಿಸಿದೆ. ನಿದ್ದೆಯಲ್ಲಿಯೂ ಅದನ್ನೇ ಕನಸುತ್ತಿದ್ದೆ. ಗುರಿ ಮುಟ್ಟದೇ ಇರಲು ಹೇಗೆ ಸಾಧ್ಯ ಎಂದು ಪದೇಪದೆ ನನ್ನನ್ನು ನಾನು ಕೇಳಿಕೊಳ್ಳುತ್ತಿದ್ದೆ. ಆದರೆ ಹಲವು ತಿಂಗಳು ಶ್ರಮ ಹಾಕಿದ್ದರೂ, ಪರೀಕ್ಷೆಯ ದಿನ ನನ್ನಿಂದ ಅದು ಸಾಧ್ಯವಾಗಲಿಲ್ಲ. ಫಲಿತಾಂಶದಿಂದ ಎದೆಗುಂದದೆ ಮತ್ತೂ ಪ್ರಯತ್ನ ಮುಂದುವರಿಸಿ, ಕಡೆಗೂ ಅದೇ ದಿನ ಹಗ್ಗದ ತುಟ್ಟ ತುದಿ ತಲುಪಿದೆ.

ತರಬೇತಿಯಲ್ಲಿ ಪಾಸಾಗಿ ಹೊರಬರುವಾಗ ನನ್ನನ್ನು 'ಅತ್ಯುತ್ತಮ ಮಹಿಳಾ ಹೊರಾಂಗಣ ಕಸರತ್ತು ವಿಭಾಗದ ಅತ್ಯುತ್ತಮ ಮಹಿಳಾ ಪ್ರೊಬೇಶನರ್, ಬೆಸ್ಟ್ ಫೀಮೇಲ್ ಆಲ್ ರೌಂಡರ್ ಹಾಗೂ ಬ್ಯಾಚ್‌ನ ಎರಡನೇ ಅತ್ಯುತ್ತಮ ಪ್ರೊಬೇಶನರ್' ಎಂದು ಘೋಷಿಸಲಾಯಿತು. ಎಲ್ಲದರಲ್ಲಿಯೂ ಸಾಧಾರಣ ಅರ್ಹತೆಗಳುಳ್ಳ ನನ್ನ ವಿಶೇಷ ಆಸ್ತಿ ಎಂದರೆ ನನ್ನ ಎತ್ತರ. ಯಾವುದನ್ನು ಶಾಲೆಯ ಸಹಪಾಠಿಗಳು ಗೇಲಿ ಮಾಡಿದ್ದರೋ, ಇಷ್ಟು ಎತ್ತರವಿದ್ದರೆ ಯೋಗ್ಯ ವರ ಸಿಗುವುದು ಕಷ್ಟ ಎಂದು ಪಾಲಕರು ಚಿಂತೆಗೊಳಗಾಗಿದ್ದರೋ, ಅದೇ ನನಗೆ ವರದಾನವಾಯಿತು. ಇಂದು ಯೂನಿಫಾರ್ಮ್ ಧರಿಸಿ, ಎತ್ತರವಾಗಿ ನಿಲ್ಲುವುದು ಗರ್ವವೆನಿಸುತ್ತದೆ.

ಒಬ್ಬ ವೈದ್ಯೆ, ಐಪಿಎಸ್ ಆಫೀಸರ್ ಆದಾಗ ಜನ ನೂರೆಂಟು ಪ್ರಶ್ನೆ ಕೇಳುವುದು ಸಹಜ. 'ಮೊದಲು ಡಾಕ್ಟರ್ ಆಗಿದ್ದಿರಿ, ಈಗ ಐಪಿಎಸ್...ಹೊಸ ಹುದ್ದೆ ಹೇಗನಿಸುತ್ತದೆ' ಎಂದು ನನ್ನನ್ನೂ ಜನ ಕುತೂಹಲದಿಂದ ಪ್ರಶ್ನಿಸುತ್ತಾರೆ. ಎರಡರ ನಡುವೆ ಅಂಥಾ ವ್ಯತ್ಯಾಸವ